ವರದಿಗಳನ್ನೊಪ್ಪಿಸುವುದು

ಶ್ರೀ ವಸಂತ ವಿ. ಸಾಲಿಯಾನ :– (ಅಧ್ಯಕ್ಷರು, ಅಧೀನಶಾಸನರಚನಾ ಸಮಿತಿ);– ಮಾನ್ಯ ಅಧ್ಯಕ್ಷರೇ, ಆಬ್ಕಾರಿ ಇಲಾಖೆಯ ಮೇಲಿನ ಮಧ್ಯಂತರ ವರದಿಯನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ :– (ಅಧ್ಯಕ್ಷರು, ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ) ಮಾನ್ಯ ಅಧ್ಯಕ್ಷರೇ, ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 11ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಸಿ. ಬೈರೇಗೌಡ :– (ಸದಸ್ಯರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ) ಮಾನ್ಯ ಅಧ್ಯಕ್ಷರೇ, ಸಮಿತಿಯ ಅಧ್ಯಕ್ಷರ ಪರವಾಗಿ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ 4ನೇ, 5ನೇ, 6ನೇ, ಮತ್ತು 7ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಕೆ.ಹೆಚ್ ಹನುಮೇಗೌಡ :– (ಅಧ್ಯಕ್ಷರು, ಅಂದಾಜು ಸಮಿತಿ) ಮಾನ್ಯ ಅಧ್ಯಕ್ಷರೇ, ಅಂದಾಜು ಸಮಿತಿಯ 3ನೇ ಮತ್ತು 4ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು :– ವರದಿಗಳನ್ನು ಸಭೆಗೆ ಒಪ್ಪಿಸಲಾಯಿತು.

ಸರ್ಕಾರಿ ನಿರ್ಣಯ

ವಿಷಯ :– ಸಂಸತ್ತಿನ ಉಭಯ ಸದನಗಳಿಂದಲೂ ಅಂಗೀಕರಿಸಲ್ಪಟ್ಟ ರೂಪದಲ್ಲಿರುವ ಸಂವಿಧಾನ ತಿದ್ದುಪಡಿ ವಿಧೇಯಕವನ್ನು ಸ್ಥಿರೀಕರಿಸುವುದು.

ಶ್ರೀ ಬ್ಲೇಸಿಯಸ್ ಎಂ. ಡಿ.ಸೋಜ (ಕಾನೂನು ಮಂತ್ರಿಗಳು) : "ಸಂಸತ್ತಿನ ಉಭಯ ಸದನಗಳಿಂದಲೂ ಅಂಗೀಕರಿಸಲ್ಪಟ್ಟ ರೂಪದಲ್ಲಿರುವ ಸಂವಿಧಾನದ 368(2)ನೇ ಅನುಚ್ಛೇದ (ಕ) ನಿಯಮದ ವ್ಯಾಪ್ತಿಯಲ್ಲಿ ಬರುವ 1992ನೇ ಇಸವಿಯ ಸಂವಿಧಾನದ (76ನೇ ತಿದ್ದುಪಡಿ) ವಿಧೇಯಕವನ್ನು ಈ ಸದನವು ಸ್ಥಿರೀಕರಿಸುತ್ತದೆ ಎಂದು ಸೂಚಿಸುತ್ತದೆ"

ಅಧ್ಯಕ್ಷರು : ಸೂಚನೆ ಮಂಡಿತವಾಗಿದೆ. ಮಾನ್ಯ ಮಂತ್ರಿಗಳು ಈಗ ವಿವರಣೆ ನೀಡಬಹುದು.

ಶ್ರೀ ಬ್ಲೇಸಿಯಸ್ ಎಂ.ಡಿ'ಸೋಜ (ಕಾನೂನು ಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಪಾಂಡಿಚೇರಿ ಹಾಗೂ ದೆಹಲಿ ವಿಧಾನಸಭೆಗಳಲ್ಲಿರುವ ಸದಸ್ಯರಿಗೆ ಪ್ರೆಸಿಡೆನ್ಸಿಯಲ್ ಓಟ್‌ಗೆ ಇದುವರಗೆ ಅವಕಾಶ ಇರಲಿಲ್ಲ. ಅವರಿಗೆ ರಾಷ್ಟ್ರಪತಿಗಳ ಚುನಾವಣೆಗಳ ಸಮಯದಲ್ಲಿ ಮತ ನೀಡಲು ಅವಕಾಶ ಕೊಡುವ ಒಂದು ಹಕ್ಕು ಕೊಡುವುದಕ್ಕೆ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಈ ತಿದ್ದುಪಡಿಯನ್ನು ಪಾರ್ಲಿಮೆಂಟಿನ ಎರಡೂ ಸದನಗಳು ಅಂಗೀಕರಿಸಿವೆ. ಅದೇ ರೀತಿಯಲ್ಲಿ 50% of the Assemblies have to ratify it. ಆ ಕಾರಣದಿಂದ ಇದನ್ನು ಇಲ್ಲಿ ತಂದಿದ್ದೇವೆ. ತಮಗೆಲ್ಲಾ ತಿಳಿದಹಾಗೆ ಇದು ಒಂದು ಸರಳ ನಿರ್ಣಯವಾಗಿದ್ದು ಇದಕ್ಕೆ ತಮ್ಮೆಲ್ಲರ ಸರ್ವಾನುಮತದಿಂದ ಒಪ್ಪಿಗೆ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :– (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಇದು ಒಂದು ಸರಳ ನಿರ್ಣಯವೆಂದು ಹೇಳಿದ್ದಾರೆ. ವಿಸ್ತಾರ ವ್ಯಾಪ್ತಿ ದೃಷ್ಟಿಯಿಂದ ರಾಷ್ಟ್ರಪತಿ ಸ್ಥಾನ ಈ ಭಾರತದ ಅತ್ಯಂತ ಉಚ್ಚ ಸ್ಥಾನ ಮತ್ತು ಈ ಸ್ಥಾನದ ಚುನಾವಣಾ ಪ್ರಕ್ರಿಯೆಯಲ್ಲಿ ದೇಶದ ಎಲ್ಲಾ ವಿವಿಧ ಭಾಗಗಳ ಪ್ರತಿನಿಧಿಗಳಿಗೆ ಕೂಡಾ ಮತ ಕೊಡತಕ್ಕ ಹಕ್ಕು ಮತ್ತು ಸ್ವಾತಂತ್ರ್ಯ ಎರಡೂ ಇರಬೇಕು. ದೆಹಲಿ ಮತ್ತು ಪಾಂಡಿಚೆರಿ ರಾಜ್ಯಗಳ ವಿಧಾನಸಭೆಗಳು ಅಸ್ತಿತ್ವಕ್ಕೆ ಬಂದಿದ್ದು ಮಂತ್ರಿ ಮಂಡಲದ ಸಮಿತಿಗಳು ರಚನೆಯಾಗಿವೆ. ಆದರೆ ಆ ರಾಜ್ಯಗಳ ವಿಧಾನಸಭಾ ಸದಸ್ಯರುಗಳಿಗೆ ರಾಷ್ಟ್ರಪತಿಗಳ ಚುನಾವಣೆಯಲ್ಲಿ ಮತ ಚಲಾಯಿಸುವುದಕ್ಕೆ ಹಕ್ಕು ಇಲ್ಲದೇ ಇದ್ದಾಗ ರಾಜ್ಯಾಂಗದ ತಿದ್ದುಪಡಿ ಅನಿವಾರ್ಯವಾಗಿದ್ದು ಇಂತಹ ತಿದ್ದುಪಡಿಗಳು ಬರಬೇಕಾಗುತ್ತದೆ. ಈ ದೇಶದಲ್ಲಿ ಮತ ಕೊಡತಕ್ಕ ಹಕ್ಕನ್ನು, ಅದೂ ರಾಷ್ಟ್ರಪತಿ ಸ್ಥಾನಕ್ಕೆ ಮತ ಕೊಡುವಾಗ ನಾನು ವಿರೋಧಪಕ್ಷದ

ನಾಯಕನಾಗಿ ಪೂರ್ಣ ಮತ್ತು ಸಂತೋಷದಿಂದ ಇದನ್ನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ನಿರ್ಣಯವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ನಿರ್ಣಯ ಈ ರೀತಿ ಇದೆ;–

"ಸಂಸತ್ತಿನ ಉಭಯ ಸದನಗಳಿಂದಲೂ ಅಂಗೀಕರಿಸಲ್ಪಟ್ಟ ರೂಪದಲ್ಲಿರುವ ಸಂವಿಧಾನದ 368(2)ನೇ ಅನುಚ್ಛೇದದ (ಕ) ನಿಯಮದ ವ್ಯಾಪ್ತಿಯಲ್ಲಿ ಬರುವ 1992ನೇ ಇಸವಿಯ ಸಂವಿಧಾನದ (76ನೇ ತಿದ್ದುಪಡಿ) ವಿಧೇಯಕವನ್ನು ಈ ಸದನವು ಸ್ಥಿರೀಕರಿಸುತ್ತದೆ.

ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಯಿತು.

ವಿಷಯ :– ಕಾವೇರಿ ಜಲ ವಿವಾದದ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :– ಮಾನ್ಯ ಅಧ್ಯಕ್ಷರೆ, ಕಾವೇರಿ ನೀರಿನ ತೀರ್ಪು ನಮಗೆ ಮರಣ ಶಾಸನವಾಗಿದೆ. ಅದರ ಬಗ್ಗೆ ನಾವು ಸುದೀರ್ಘವಾಗಿ ಚರ್ಚೆ ಮಾಡಬೇಕು. ಅದರ ಜೊತೆಗೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪದೇ ಪದೇ ಒತ್ತಾಯ ಮಾಡುತ್ತಿದ್ದೇನೆ. ಸದನದ ಒಳಹೊ ಮತ್ತು ಹೊರಗಡೆ ಎರಡೂ ಕಡೆ ಒತ್ತಾಯ ಮಾಡುತ್ತಿದ್ದೇನೆ ನೀವು ಸರ್ಕಾರದ ಸ್ಪಷ್ಟವಾದ ನಿಲುವನ್ನು ತಿಳಿಸಬೇಕು ಹಾಗೂ ಈಗಿನ ನ್ಯಾಯಮಂಡಳಿಯನ್ನು ನಾವು ಬಹಿಷ್ಕಾರ ಮಾಡಿದ್ದೇವೆ. ಇದು ನಮ್ಮ ಸರ್ಕಾರದ ನಿಲುವು ಎಂದು ತಾವು ಹೇಳಬೇಕು. ನಾನು ನ್ಯಾಯಮಂಡಳಿಯ ಬಗ್ಗೆ ಗೌರವ ಇಟ್ಟುಕೊಂಡವನು. ಆದರೆ ನ್ಯಾಯಮಂಡಳಿಯನ್ನು ನೇಮಕ ಮಾಡುವಾಗ ಪ್ರಥಮವಾಗಿ ವಿರೋಧ ಮಾಡಿದವನು ನಾನು. ಇವತ್ತು ಆ ನ್ಯಾಯಮಂಡಳಿಯ ತೀರ್ಪನ್ನು ನೋಡಿದಾಗ ಆ ತೀರ್ಪು ಸಮಗ್ರ ಕನ್ನಡಿಗರ ಮರಣ ಶಾಸನಕ್ಕೆ ಸರಿಸಮಾನವಾದ ತೀರ್ಪಾಗಿದೆ ಇವತ್ತು ಈ ಸಭೆಯಲ್ಲಿ ಈ ತೀರ್ಪಿನ ಬಗ್ಗೆ ಪ್ರತಿಭಟನೆ ಮಾಡಲೇಬೇಕು. ಯಾವರೀತಿ ಮಾಡಬೇಕೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಸದನದ ಗಾಂಭೀರ್ಯತೆ, ಸದನದ ಗೌರವ, ಸದನದ ಒಂದು ಶಕ್ತಿ, ಸದನದ ವ್ಯವಸ್ಥೆ, ಸದನದ ಅಧಿಕಾರ, ಎಲ್ಲ ನನಗೆ ಗೊತ್ತಿದೆ. ಆದರೂ ಸಹಿತ ಇಂತಹ ಒಂದು ತೀರ್ಪನ್ನು ಆ ನ್ಯಾಯಮಂಡಳಿಯ ಸದಸ್ಯರು ಕೊಟ್ಟಿದ್ದಾರೆ. ಇದನ್ನು ನಾವು ಸಂಪೂರ್ಣವಾಗಿ ತಿರಸ್ಕರಿಸಬೇಕು. ನ್ಯಾಯಮಂಡಳಿಯನ್ನು ಬಹಿಷ್ಕರಿಸಬೇಕು. ಇದರ ಜೊತೆಗೆ ನ್ಯಾಯಮಂಡಳಿಯ ಸದಸ್ಯರ ನಡುವಳಿಕೆಯ ಬಗ್ಗೆ ಈ ರಾಜ್ಯದ ಹಿರಿಯ ನಾಯಕರು ಹಾಗೂ ಲೋಕಸಭಾಸದಸ್ಯರು ಆದ ಶ್ರೀಮಾನ್ ಹೆಚ್. ಡಿ. ದೇವೇಗೌಡರು ಅಲ್ಲಿನ ಹೈಕೋರ್ಟಿನಲ್ಲಿ ಟ್ರಿಬ್ಯುನಲ್‌ನ ನ್ಯಾಯಾಧೀಶರ ನಡವಳಿಕೆ ಬಗ್ಗೆ ಒಂದು ದಾವೆಯನ್ನು ಹಾಕಿದ್ದಾರೆ . ಇದೆಲ್ಲವೂ ನಡೆದಿರುವಾಗ ಕರ್ನಾಟಕ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕನ್ನಡ ನಾಡಿನ ಸಮಗ್ರ ಜನತೆಯ ಪರವಾಗಿ ಈ ತೀರ್ಪನ್ನು ಸದನದಲ್ಲಿ ನಾನು ಸುಡಬೇಕೆಂದು ಮಾಡಿದ್ದೇನೆ. ಅಂದರೆ ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ತಮಗೆ ಹೇಳದೆ ಈ ರೀತಿ ಮಾಡಬಾರದು ಅದು ನನಗೆ ಗೊತ್ತಿದೆ. ಆದರೂ ಸಹಿತ ಇಂತಹ ಪರಿಸ್ಥಿತಿಗೆ ನಾವು ತಲಪಿದ್ದೇವೆ ಇದಕ್ಕೆ ಕಾರಣವೇನು? ನಮ್ಮ ನಾಡಿನ ಜನತೆಗೆ ಕಾವೇರಿ ಬಗ್ಗೆ ಕೊಟ್ಟ ತೀರ್ಪು ಏನಿದೆ, ಇಂತಹ ತೀರ್ಪು ಕನ್ನಡನಾಡಿಗೆ ಎಂದೂ ಬಂದಿರಲಿಲ್ಲ. ಈ ಸಭೆಯ ಘನತೆ ಗೌರವ ಗಾಂಭೀರ್ಯತೆಯ ಬಗ್ಗೆ ಚಿಂತನೆ ಮಾಡಿದ್ದೇನೆ. ಆದರೂ ನನ್ನ ನೋವನ್ನು ಪ್ರತಿಭಟಿಸತಕ್ಕ ರೀತಿ ಈ ತೀರ್ಪನ್ನು ಸದನದಲ್ಲಿ ಸುಡಲೇಬೇಕಾಗಿದೆ. ತಾವು ನನಗೆ ಏನೂ ಮಾಡಿದರೂ ಚಿಂತೆಯಿಲ್ಲ.

ಅಧ್ಯಕ್ಷರು : ನೀವು ತೀರ್ಪನ್ನು ಸುಡಲಿಕ್ಕೆ ಹೊರಟು ಸದನ ಸುಟ್ಟುಹಾಕಿಬಿಟ್ಟರೆ?

ಶ್ರೀ ವಾಟಾಳ್‌ನಾಗರಾಜ್ : ಇಲ್ಲ.

ಅಧ್ಯಕ್ಷರು : ಮಾನ್ಯ ಸದಸ್ಯರೇ ಇಲ್ಲಿ ನೋಡಿಸ ಇಲ್ಲಿ ಎಲ್ಲ ಪೂರ್ತಿ ಮರ ಇದೆ.

ಶ್ರೀ ಬಸವರಾಜರಾಯ ರೆಡ್ಡಿ : ಮರದ ಮೇನೆ ಕಾರ್ಪೆಟ್ ಇದೆ .

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ವಾಟಾಳ್‌ನಾಗರಾಜ್‌ರವರು ಬಹಳ ಹಿರಿಯ